ಪ್ರಬಂಧ

# ಸಮರ್ಪಣಾ




**ಜಿ.ಎನ್. ಧನಂಜಯ ಮೂರ್ತಿ**

ಕಲೆ: ಗುಜ್ಜಾರ್


ರಹಮತ್ ತರೀಕೆರೆಯವರು 'ಸಮತಳ, ತರೀಕೆರೆ, ಮೈಸೂರು, ಶಿವಮೊಗ್ಗ ಮತ್ತು ಹೊಸಪೇಟೆಗಳು ನನ್ನ ಬಾಳನ್ನು ರೂಪಿಸಿದ ಊರುಗಳು. ಹಾಗಾಗಿ ಈ ಊರುಗಳಿಗೆ ನನ್ನ ಆತ್ಮಕಥೆಯನ್ನು ಅರ್ಪಿಸಿದ್ದೇನೆ' ಎಂದು ಆತ್ಮಕಥೆ ಬಿಡುಗಡೆ ಸಂದರ್ಭದಲ್ಲಿ ಹೇಳಿದ್ದರು. ಲೇಖಕನೊಬ್ಬ ತನ್ನ ಪುಸ್ತಕವನ್ನು ಅರ್ಪಣೆ ಮಾಡುವುದು ಹಲವು ಅರ್ಥಸಾಧ್ಯತೆಗಳಿಗೆ ಎಡೆಮಾಡಿಕೊಡುವುದರಿಂದ ಈ ವಿದ್ಯಮಾನ ಸಾಂಸ್ಕೃತಿಕವಾಗಿ ಮಹತ್ವದ್ದು. ಈ ಮಾತನ್ನು ಕೇಳುತ್ತಿದ್ದಾಗ ಕೆಲವು ಕೃತಿಗಳ ಅರ್ಪಣೆಗಳು ಸ್ಮೃತಿ ಪಟಲದಿಂದ ನೆಗೆದು ಬಂದು ಕಾಡಹತ್ತಿದವು. ಅವುಗಳನ್ನು ಇಲ್ಲಿ ಪಟ್ಟಿ ಮಾಡುವುದು ಉದ್ದೇಶವಲ್ಲವಾದರೂ ಕೆಲವು ಅರ್ಪಣೆಗಳು ಯಾಕೆ ಮುಖ್ಯ ಎಂಬುದನ್ನು ಗುರುತಿಸುವುದು ಸದ್ಯದ ಹಕೀಕತ್ತು. ತರೀಕೆರೆಯವರನ್ನು ರೂಪಿಸಿದ ಸದರಿ ಐದು ಊರುಗಳಲ್ಲಿ ಒಂದಕ್ಕೆ ಕೋಮುನಿಗ್ರಹ ಪಡೆ ಸ್ಥಾಪಿಸಲು ಕರ್ನಾಟಕ ಸರ್ಕಾರ ಸನ್ನದ್ಧವಾಗಿದೆ. ಕಾಲದ ಗತಿಯಲ್ಲಿ ಯಾವುದೇ ಊರು, ವ್ಯಕ್ತಿ, ಸಂಗತಿಗಳ ಚಹರೆಗಳಲ್ಲಿ ಸ್ಥಿತ್ಯಂತರಗಳಾಗಬಹುದು. ಈ ಪರಿವರ್ತನೆ ಇತ್ಯಾತ್ಮಕವಾಗಿರಬೇಕೆಂದೇನೂ ಇಲ್ಲ. ಆಯಾಕಾಲದ ರಾಜಕಾರಣಕ್ಕೆ ಸಿಕ್ಕು ಕೆಲವು ಊರುಗಳು ತಮ್ಮ ಹಿಂಸೆಯ ಸಿಕ್ಕನ್ನು ಬಿಡಿಸಿಕೊಳ್ಳಲೂಬಹುದು ಅಥವಾ ನೆಮ್ಮದಿಯ ತಾಣವಾಗಿದ್ದ ಊರುಗಳು ಸಮಸ್ಯಾತ್ಮಕವಾಗಿ ತಲೆದೋರಬಹುದು.

ಸಾಮಾನ್ಯವಾಗಿ ಲೇಖಕರು ಕೃತಿಗಳನ್ನು ತಮ್ಮ ಬಂಧುಗಳಿಗೋ ಅಥವಾ ತಮ್ಮನ್ನು ರೂಪಿಸಿದ ಘನ ವ್ಯಕ್ತಿತ್ವಗಳಿಗೋ ಅಥವಾ ತಮ್ಮ ಸಾಂಸ್ಕೃತಿಕ ಪರಂಪರೆಯ ಪೂರ್ವಸೂರಿಗಳಿಗೋ ಅರ್ಪಿಸುವುದು ರೂಢಿ. ಹೊಸಗನ್ನಡದ ಆರಂಭದ ಕೃತಿಗಳಲ್ಲಿ ಇದನ್ನು ಕಾಣಬಹುದು. ಸಂಶೋಧಕರು, ಲೇಖಕರು, ಆ್ಯಕ್ಟಿವಿಸ್ಟ್‌ಗಳು, ರಾಜಕಾರಣಿಗಳು, ಸಮಾಜ ವಿಜ್ಞಾನಿಗಳು ಮಾಡುವ ಅರ್ಪಣೆಗಳು ಭಿನ್ನವಾಗಿರುತ್ತವೆ. ಸಂಶೋಧಕರು ತಮಗೆ ನೆರವಾದ ವ್ಯಕ್ತಿಗಳಲ್ಲಿ ಯಾರನ್ನೂ ಬಿಡದೆ ನೆನಪಿಸಿ ಕೊಳ್ಳಬೇಕಾದ ಪ್ರಮೇಯವಿದ್ದರೆ ಲೇಖಕರು ಚರಿತ್ರೆಯಲ್ಲಿ ಆಗಿ ಹೋದ ಇನ್ನೊಬ್ಬ ಧೀಮಂತ ಮಹಾಂತರಿಗೆ ಅರ್ಪಣೆ ಮಾಡಿರುವುದನ್ನು ನೋಡಬಹುದು. ದೇವನೂರರ 'ಕುಸುಮಬಾಲೆ'ಯ ಅರ್ಪಣೆ "ಪೂರ್ವಿಕ ಮಾದಾರ ಮಲೆ ಮಾದೇಶ್ವರಂಗೆ ಅರ್ಪಿತ" ಎಂದಿದೆ. ದಲಿತ ಚಳವಳಿಯ ಕಾಲಘಟ್ಟದಲ್ಲಿ ಸಿಡಿದುಬಂದ ಕೃತಿಗಳ ಅರ್ಪಣೆಗಳು